**<u>ದಿನಾಂಕಃ 04.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

**10.** ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ನನ್ನ ವ್ಯವಹಾರಕ್ಕೆ ಸಂಬಂಧಸಿದ ಜಿಎಸ್‌ಟಿ ಸರ್ಟಿಫಿಕೇಟ್ ಎಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು **<u>ನಿ.ಡಿ.2</u>** ಎಂದು ಗುರುತಿಸಲಾಯಿತು. ನಿ.ಪಿ.22 ರಲ್ಲಿ ರಿಷಬ್ ಎಂಟರ್‌ಪ್ರೈಸಸ್ ನ ಪ್ರೊಪ್ರೈಟರ್ ಶಾಂತಿ ಕಾನುಂಗ ಎಂದು ಇದೆ. ನಿ.ಪಿ.22 ರಲ್ಲಿ ನಮೂದಿಸಿರುವ ವಿಳಾಸದಲ್ಲಿಯೇ ಪಿರ್ಯಾದುದಾರರ ಕಂಪನಿ ಇದೆ ಎಂದರೆ ಸಾಕ್ಷಿಯು ಈ ಮೊದಲು ಚಾಮರಾಜಪೇಟೆಯಲ್ಲಿ ಇದ್ದು, ಈಗ ನಿ.ಪಿ.22 ರಲ್ಲಿ ನಮೂದಿಸಿರುವ ವಿಳಾಸದಲ್ಲಿ ಇದೆ. ನಿ.ಪಿ.22 ರಲ್ಲಿ ಶಾಂತಿ ಕಾನುಂಗ ಎಂದು ನಮೂದಿದೆ ಎಂದರೆ ಸರಿ. ನಿ.ಡಿ.2 ರಲ್ಲಿ ಶಾಂತಿ ದೇವಿ ಕಾನುಂಗ ಎಂದು ನಮೂದಿದೆ ಎಂದರೆ ಸರಿ. ಪಿರ್ಯಾದುದಾರರ ಕಂಪನಿಯ ಮಾಲೀಕರು ಶಾಂತಿ ಕಾನುಂಗ ಅಥವಾ ಶಾಂತಿ ದೇವಿ ಕಾನುಂಗ ಯಾರು ಆಗಿರುತ್ತಾರೆ ಎಂದರೆ ಸಾಕ್ಷಿಯು ಎರಡು ಹೆಸರುಗಳು ಒಂದೇ ವ್ಯಕ್ತಿಯದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಎರಡು ಹೆಸರುಗಳು ಒಂದೇ ವ್ಯಕ್ತಿಯಾಗಿರುತ್ತದೆ ಎಂದು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ, ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.22 ಮತ್ತು ನಿ.ಡಿ.2 ರಲ್ಲಿ ಪಿರ್ಯಾದುದಾರರ ವಿಳಾಸಗಳು ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಎರಡು ದಾಖಲೆಗಳಲ್ಲಿ ವಿಳಾಸ ವ್ಯತ್ಯಾಸವಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**11.** ದೂರಿನಲ್ಲಿ ಪಿರ್ಯಾದುದಾರರ ಸಂಸ್ಥೆಯ ಪ್ರೊಪ್ರೈಟರ್ ಶಾಂತಿ ಕಾನುಂಗ ಎಂಬ ನಮೂದಿದೆ ಎಂದರೆ ಸರಿ. ಜಿಎಸ್‌ಟಿ ಸರ್ಟಿಫಿಕೇಟಿನಲ್ಲಿ ಶಾಂತಿ ದೇವಿ ಕಾನುಂಗ ಎಂದು ನಮೂದಿದೆ ಎಂದರೆ ಸರಿ. ಪಿರ್ಯಾದುದಾರರ ಸಂಸ್ಥೆಯ ಮಾಲೀಕರು ನನ್ನ ಹೆಂಡತಿ ಶಾಂತಿ

ಕಾನುಂಗ ಆಗಿದ್ದು, ಅದರ ಎಲ್ಲಾ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ನೀವು ಪಿರ್ಯಾದುದಾರರ ಕಂಪನಿಯಲ್ಲಿ ಮ್ಯಾನೇಜರ್ ಅಥವಾ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೀರಾ ಎಂದರೆ ಸಾಕ್ಷಿಯು ನಾನು ಎಲ್ಲಾ ರೀತಿಯ ಕೆಲಸ ಮಾಡುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರ ಸಂಸ್ಥೆಯಲ್ಲಿ ನೀವು ಎಲ್ಲಾ ರೀತಿಯಲ್ಲೂ ಕೆಲಸ ಮಾಡುತ್ತಿದ್ದೀರಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ರಿಷಬ್ ಎಂಟರ್‌ಪ್ರೈಸಸ್ ನ ಮಾಲೀಕರು ಶಾಂತಿ ಕಾನುಂಗರವರು ನಿಮಗೆ ಜಿಪಿಎ ಅಥವಾ ಅಧಿಕೃತ authorization letter ಅನ್ನು ನೀಡಿಲ್ಲ ಎಂದರೆ ಸರಿಯಲ್ಲ. ರಿಷಬ್ ಎಂಟರ್‌ಪ್ರೈಸಸ್ ನ ಮಾಲೀಕರು ಶಾಂತಿ ದೇವಿ ಕಾನುಂಗ ಆಗಿದ್ದು ಅವರಿಗೆ ತಿಳಿಯದಂತೆ ಶಾಂತಿ ಕಾನುಂಗ ಎಂದು ಹೆಸರನ್ನು ಸೃಷ್ಟಿಸಿ ನಿ.ಪಿ.22 ರಂತೆ ಸುಳ್ಳು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.22 ಕ್ಕೆ ಸಂಬಂಧಿಸಿದಂತೆ ಶಾಂತಿ ದೇವಿ ಕಾನುಂಗರವರು ನನಗೆ ಜಿಪಿಎ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯಾಗಲೀ ಅಥವಾ ಅವರ ಕಂಪನಿಯಾಗಲೀ ಗೌತಮ್ ಕಾನುಂಗ ಆದ ನಿಮ್ಮ ಜೊತೆ ಎಂದಿಗೂ ವ್ಯವಹರಿಸಿಲ್ಲ ಎಂದರೆ ಸರಿಯಲ್ಲ.

**12.** ರಿಷಬ್ ಎಂಟರ್‌ಪ್ರೈಸಸ್ ಸಂಸ್ಥೆಯು ಒಂದು ಬ್ಯಾಂಕ್ ಖಾತೆಯನ್ನು ಹೊಂದಿದ್ದು, ಅದು ಆ್ಯಕ್ಸಿಸ್ ಬ್ಯಾಂಕ್, ಚಾಮರಾಜಪೇಟೆ ಶಾಖೆಯಲ್ಲಿದೆ. ಸದರಿ ಬ್ಯಾಂಕ್ ಖಾತೆಯನ್ನು ಹೊರತುಪಡಿಸಿ ಪಿರ್ಯಾದುದಾರರ ಸಂಸ್ಥೆಗೆ ಬೇರೆ ಬ್ಯಾಂಕಿನಲ್ಲಿ ಖಾತೆ ಇರುವುದಿಲ್ಲ. ಪಿರ್ಯಾದುದಾರರ ಸಂಸ್ಥೆಯು ಆ್ಯಕ್ಸಿಸ್ ಬ್ಯಾಂಕಿನಲ್ಲಿ ಚಾಲ್ತಿ ಖಾತೆಯನ್ನು ಹೊಂದಿರುತ್ತದೆ. ರಿಷಬ್ ಎಂಟರ್‌ಪ್ರೈಸಸ್ ನ ಎಲ್ಲಾ ಹಣಕಾಸಿನ ವ್ಯವಹಾರವು ಆ್ಯಕ್ಸಿಸ್ ಬ್ಯಾಂಕಿನ ಮುಖಾಂತರ ನಡೆಯುತ್ತದೆ. ಶಾಂತಿ ಕಾನುಂಗರವರು ರಿಷಬ್ ಎಂಟರ್‌ಪ್ರೈಸಸ್ ನ ಆ್ಯಕ್ಸಿಸ್ ಬ್ಯಾಂಕಿನ authorized signatory ಆಗಿರುತ್ತಾರೆ. ರಿಷಬ್ ಎಂಟರ್‌ಪ್ರೈಸಸ್ ನ ಆ್ಯಕ್ಸಿಸ್ ಬ್ಯಾಂಕಿನ

authorized signatory ಶಾಂತಿ ದೇವಿ ಕಾನುಂಗ ಆಗಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ಶಾಂತಿ ದೇವಿ ಕಾನುಂಗ ಎಂದು ಇದ್ದು ಅದನ್ನು ಈಗ ಶಾಂತಿ ಕಾನುಂಗ ಎಂದು ಬದಲಾಯಿಸಿದ್ದೇನೆ. ಆರೋಪಿಯು ಪಾವತಿಸಿರುವ ಎಲ್ಲಾ ಮೊತ್ತವು ರಿಷಬ್ ಎಂಟರ್‌ಪ್ರೈಸಸ್ ನ ಆ್ಯಕ್ಸಿಸ್ ಬ್ಯಾಂಕಿಗೆ ಜಮಾ ಆಗಿರುತ್ತದೆ ಎಂದರೆ ಸರಿ.

**13.** ನಿ.ಪಿ.20 ರಲ್ಲಿ Kriyanshi Textiles ಎಂದು ನಮೂದಾಗಿದ್ದು ಅದು ಆರೋಪಿಗೆ ಸೇರಿದ ಕಂಪನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿನಲ್ಲಿ ನಮೂದಿಸಿರುವ ಆರೋಪಿತರ ವಿಳಾಸ ಹಾಗೂ ನಿ.ಪಿ.20 ರಲ್ಲಿ ನಮೂದಿಸಿರುವ ಆರೋಪಿಯ ವಿಳಾಸದಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿ.ಪಿ.20 ರಲ್ಲಿರುವ ಆರೋಪಿಯ ವಿಳಾಸ ತಪ್ಪಾಗಿ ನಮೂದಾಗಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2022 ನೇ ಏಪ್ರಿಲ್ ಮಾಹೆಯಲ್ಲಿ ಆರೋಪಿಯಿಂದ ಹಣ ಪಾವತಿಯಾಗಿದೆಯೋ ಇಲ್ಲವೋ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.20 ನಮ್ಮ ಸಂಸ್ಥೆಯ ಅಕೌಂಟ್ ಎಕ್ಸ್ ಟ್ರಾಕ್ಟ್ ಆಗಿದ್ದು ಅದರಲ್ಲಿ 2022 ರ ಏಪ್ರಿಲ್ ಮಾಹೆಯ ವ್ಯವಹಾರದ ಬಗ್ಗೆ ನಮೂದಾಗಿರುವುದಿಲ್ಲ. ನಿ.ಪಿ.20 ರ ಅಕೌಂಟ್ಸ್ ಸ್ಟೇಟ್ ಮೆಂಟಿನಲ್ಲಿ ಆರೋಪಿಯಿಂದ ಹಣ ಸಂದಾಯವಾಗಿರುವ ಬಗ್ಗೆ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಿ ನಮೂದಾಗಿರುವುದಿಲ್ಲ ಎಂದು ನುಡಿಯುತ್ತಾರೆ. ದಿ.07.04.2022 ರಂದು ಆರೋಪಿಯ ಖಾತೆಯಿಂದ ತಲಾ ರೂ.2 ಲಕ್ಷಗಳಂತೆ ಒಟ್ಟು ರೂ.4 ಲಕ್ಷ ರಿಷಬ್ ಎಂಟರ್‌ಪ್ರೈಸಸ್‌ಗೆ ಜಮಾಗೊಂಡಿದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ರಿಷಬ್ ಎಂಟರ್‌ಪ್ರೈಸಸ್ ನ ಆ್ಯಕ್ಸಿಸ್ ಬ್ಯಾಂಕಿನ ಖಾತೆಯನ್ನು ಪರಿಶೀಲಿಸಿ ನಿ.ಪಿ.20 ಅನ್ನು ತಯಾರಿಸಿರುತ್ತೇನೆ. ದಿ.01.04.2022 ರಿಂದ

**ಪಿಡಬ್ಲ್ಯೂ.1: ಎನ್. ಗೌತಮ್ ಕನುಂಗ.,**

ದಿ.03.05.2023 ರವರೆಗಿನ ರಿಷಬ್ ಎಂಟರ್‌ಪ್ರೈಸಸ್ ನ ಆ್ಯಕ್ಸಿಸ್ ಬ್ಯಾಂಕಿನ ಅಕೌಂಟ್ ಎಕ್ಸ್ ಟ್ರಾಕ್ಟನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯ ಆ ದಾಖಲೆಗಳನ್ನು ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಿ.08.04.2022 ರಂದು ಆರೋಪಿ ಕಂಪನಿಯಿಂದ ರೂ.1,88,578/- ಗಳು ಪಿರ್ಯಾದುದಾರರ ಸಂಸ್ಥೆಗೆ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ದಿ.10.12.2021 ರಿಂದ ದಿ.03.05.2023 ರವರೆಗೆ ನಿಮ್ಮ ಮತ್ತು ಆರೋಪಿಯ ನಡುವೆ ವ್ಯವಹಾರ ಆಗಿರುತ್ತದೆ ಎಂದರೆ ಸರಿ. ನಿ.ಪಿ.20 ರಂತೆ ಹಿಂದಿನ ವ್ಯವಹಾರದ ದಾಖಲೆಗಳನ್ನು ಹೊರತುಪಡಿಸಿ ನನಗೆ ಅನುಕೂಲವಾಗುವ ದಾಖಲೆಗಳನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಿ.10.05.2022 ರಂದು ಆರೋಪಿ ಕಂಪನಿಯಿಂದ ರೂ.1 ಲಕ್ಷ ಪಾವತಿಯಾಗಿರುವ ಬಗ್ಗೆ ನಿ.ಪಿ.20 ರಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ನಮೂದಾಗಿರುವುದಿಲ್ಲ ಎಂದು ನುಡಿಯುತ್ತಾರೆ. ದಿ.10.12.2021 ರಿಂದ ದಿ.03.05.2023 ರವೆರಗೆ ನಿಮ್ಮ ಮತ್ತು ಆರೋಪಿಯ ನಡುವೆ ಆದಂತಹ ವ್ಯವಹಾರಕ್ಕೆ ಸಂಬಂಧಿಸಿದ ಲೆಡ್ಜರ್ ಅಕೌಂಟ್ ಹಾಜರುಪಡಿಸಲಾಗುತ್ತದೆಯೇ ಎಂದರೆ ಸಾಕ್ಷಿಯು ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಅಲಿಸಿ ನೀಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು